# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 932 |
| ಸದಸ್ಯರ ಹೆಸರು | : | ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 21.12.2021 |
| ಸದಸ್ಯರ ಹೆಸರು | : | ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಭಾಗ್ಯಲಕ್ಷ್ಮಿ ಯೋಜನೆ ಯಾವಾಗ ಪ್ರಾರಂಭಿಸಲಾಯಿತು; ಯೋಜನೆಯ ಅರ್ಹತೆಗಳು ಯಾವುವು; ಯೋಜನೆಯಡಿ ಪ್ರಸ್ತುತ ಬಾಂಡ್‌ಗಳ ಬದಲಿಗೆ ಮಾಡಲಾದ ಬದಲಾವಣೆಗಳು ಯಾವುವು; ಪ್ರಸ್ತುತ ಭಾಗ್ಯಲಕ್ಷ್ಮಿ ಯೋಜನೆಯಲ್ಲಿ ಸುಕನ್ಯಾ ಸಮೃದ್ಧಿ ನಿಧಿಗೆ ಸರ್ಕಾರದ ಬಾಬ್ತು ಪಾವತಿಗೆ ಬಾಕಿಯಿರುವ ಮೊತ್ತವೆಷ್ಟು; | ಭಾಗ್ಯಲಕ್ಷ್ಮಿ ಯೋಜನೆಯು 2006-07ನೇ ಸಾಲಿನಿಂದ ಪ್ರಾರಂಭವಾಗಿರುತ್ತದೆ. ಯೋಜನೆಯ ಅರ್ಹತೆಗಳನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ.<br><br>ಯೋಜನೆಯಡಿ ಪ್ರಸ್ತುತ ಬಾಂಡ್‌ಗಳ ಬದಲಿಗೆ ಸುಕನ್ಯಾ ಸಮೃದ್ಧಿ ಖಾತೆ ಯೋಜನೆಯಡಿ ಪಾಸ್ ಬುಕ್ ಗಳನ್ನು ವಿತರಿಸಲಾಗುತ್ತಿದೆ.<br><br>ಸುಕನ್ಯಾ ಸಮೃದ್ಧಿ ನಿಧಿಗೆ 2020-21 ರಿಂದ ಸರ್ಕಾರದ ಬಾಬ್ತು ಪಾವತಿಗೆ ಬಾಕಿ ಇರುವುದಿಲ್ಲ. |
| ಆ. | ಉಡುಪಿ ಜಿಲ್ಲೆಯಲ್ಲಿ ಯೋಜನೆ ಪ್ರಾರಂಭವಾದಂದಿನಿಂದ ಇಲ್ಲಿಯವರಿಗೆ ಎಷ್ಟು ಅರ್ಜಿಗಳು ಸಲ್ಲಿಕೆಯಾಗಿವೆ; ಎಷ್ಟು ಬಾಂಡ್‌ಗಳನ್ನು ನೀಡಲಾಗಿದೆ. ಎಷ್ಟು ಬಾಂಡ್ ನೀಡಲು ಬಾಕಿ ಇದೆ; | ಉಡುಪಿ ಜಿಲ್ಲೆಯಲ್ಲಿ ಯೋಜನೆ ಪ್ರಾರಂಭವಾದಂದಿನಿಂದ ಇಲ್ಲಿಯವರಿಗೆ 46540 ಅರ್ಜಿಗಳು ಸಲ್ಲಿಕೆಯಾಗಿರುತ್ತವೆ.<br>ಇವುಗಳಲ್ಲಿ 41887 ಬಾಂಡ್ ಮತ್ತು 3118 ಸುಕನ್ಯಾ ಸಮೃದ್ಧಿ ಪಾಸ್ ಪುಸ್ತಕಗಳನ್ನು ನೀಡಲಾಗಿದೆ.<br>1535 ಸುಕನ್ಯಾ ಸಮೃದ್ಧಿ ಯೋಜನೆಯ ಪಾಸ್ ಪುಸ್ತಕ ನೀಡಲು ಬಾಕಿ ಇದೆ. |
| ಇ. | ಉಡುಪಿ ಜಿಲ್ಲೆಯಲ್ಲಿ ಸಕಾಲದಲ್ಲಿ ಅರ್ಜಿ ಸಲ್ಲಿಸಿಯೂ ಅಧಿಕಾರಿಗಳ/ಇಲಾಖೆಯ ನಿರ್ಲಕ್ಷತೆಯಿಂದಾಗಿ ಯೋಜನೆಯಿಂದ ವಂಚಿತರಾದ ಫಲಾನುಭವಿಗಳ ಸಂಖ್ಯೆ ಎಷ್ಟು; ಈ ಬಗ್ಗೆ ವಿಚಾರಣೆ ನಡೆಸಿ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆಯೆ; ತಮ್ಮದಲ್ಲದ ತಪ್ಪಿಗೆ ಯೋಜನೆಯಿಂದ ವಂಚಿತರಾದ ಈ ಫಲಾನುಭವಿಗಳನ್ನು ಯೋಜನೆಗೆ ಸೇರ್ಪಡೆಗೊಳಿಸಲು ಸರ್ಕಾರದ ಕ್ರಮವೇನು? (ಫಲಾನುಭವಿಗಳ ಹೆಸರು ಮತ್ತು ವಿಳಾಸದೊಂದಿಗೆ ಮಾಹಿತಿ ನೀಡುವುದು) | ಉಡುಪಿ ಜಿಲ್ಲೆಯಲ್ಲಿ ಸಕಾಲದಲ್ಲಿ ಅರ್ಜಿ ಸಲ್ಲಿಸಿಯೂ ನಿರ್ಲಕ್ಷತೆಯಿಂದಾಗಿ 16 ಫಲಾನುಭವಿಗೆ ಬಾಂಡ್ ನೀಡಲಾಗಿರುವುದಿಲ್ಲ.<br><br>ಈ ಬಗ್ಗೆ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲಾಗಿರುತ್ತದೆ. ನಂತರ ಈ ಬಗ್ಗೆ ಪರಿಶೀಲಿಸಲಾಗಿದ್ದು ಯೋಜನೆಯ ಸೌಲಭ್ಯ ಒದಗಿಸಲು ಭಾಗ್ಯಲಕ್ಷ್ಮಿ ಯೋಜನೆಯ ಅರ್ಜಿಗಳನ್ನು ಅಂಗನವಾಡಿ ಕಾರ್ಯಕರ್ತೆಯರು ಸಂಗ್ರಹಿಸಿ ವಲಯ ಮೇಲ್ವಿಚಾರಕಿಯರಿಗೆ ನೀಡಿದ ನಂತರ ಸದರಿ ದತ್ತಾಂಶವನ್ನು ಗಣಕ ಯಂತ್ರದಲ್ಲಿ ಅಳವಡಿಸಿ ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಹಾಗೂ ಉಪನಿರ್ದೇಶಕರು ಅನುಮೋದಿಸಿದ ನಂತರ ಸದರಿ ದತ್ತಾಂಶವನ್ನು ಸಿಡಿಗೆ ವರ್ಗಾಯಿಸಿ ಎಲ್.ಐ.ಸಿಗೆ ನೀಡಬೇಕಾಗಿರುತ್ತದೆ. ಈ ಸಮಯದಲ್ಲಿ ಗಣಕ ಯಂತ್ರದ ಅರಿವಿಲ್ಲದೆ ಇರುವುದರಿಂದ ಕೆಲವು ತಾಂತ್ರಿಕ ಕಾರಣಗಳಿಂದ ಸದರಿ ಮಕ್ಕಳ ಮಾಹಿತಿ ಬಿಟ್ಟುಹೋಗಿರುತ್ತದೆ. |

| | | |
|---|---|---|
| | | 2009-10ನೇ ಸಾಲಿನ ಆಡಳಿತಾತ್ಮಕ ಹಾಗೂ ತಾಂತ್ರಿಕ ತೊಂದರೆಯಿಂದ ವಿಳಂಬವಾಗಿರುವ ಅರ್ಜಿಗಳಿಗೆ ಮಂಜೂರಾತಿ ಕೋರಿ ಪ್ರಸ್ತಾವನೆ 2015ರಲ್ಲಿ ಸ್ವೀಕೃತವಾಗಿದ್ದು, ಆಡಳಿತಾತ್ಮಕ ಕಾರಣಗಳಿಂದ ಒಪ್ಪಲು ಸಾಧ್ಯವಿರುವುದಿಲ್ಲ.<br>ತಾಂತ್ರಿಕ ಸಮಸ್ಯೆಗಳನ್ನು ಪರಿಹರಿಸಲು ಭಾಗ್ಯಲಕ್ಷ್ಮಿ ತಂತ್ರಾಂಶವನ್ನು ಅಭಿವೃದ್ಧಿ ಪಡಿಸಿ ಆನ್‌ಲೈನ್ ನಲ್ಲಿ ಅರ್ಜಿಗಳನ್ನು ನೋಂದಣಿ ಮಾಡಲಾಗುತ್ತಿದೆ.<br>(ಫಲಾನುಭವಿಗಳ ಹೆಸರು ಮತ್ತು ವಿಳಾಸದ ಮಾಹಿತಿಯನ್ನು ಅನುಬಂಧ-2ರಲ್ಲಿ ಒದಗಿಸಲಾಗಿದೆ) |

**ಸಂಖ್ಯೆ:** ಮಮಇ 129 ಮಮಅ 2021

Halappa B

(ಆಚಾರ್ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು
ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ
ಹಿರಿಯ ನಾಗರಿಕರ ಸಬಲೀಕರಣ ಸಚಿವರು.

ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 932 ಕ್ಕೆ

ಅನುಬಂಧ-1

**ಪ್ರಸ್ತುತ ಯೋಜನೆಯ ಸೌಲಭ್ಯ ಪಡೆಯಲು ಇರಬೇಕಾದ ಅರ್ಹತೆಯ ಅಂಶಗಳು :**

**ಭಾಗ್ಯಲಕ್ಷ್ಮಿ ಯೋಜನೆಯನ್ನು 2006-07ನೇ ಸಾಲಿನಿಂದ ಜಾರಿಗೊಳಿಸಲಾಗಿದೆ ಈ ಬಗ್ಗೆ ಸರ್ಕಾರದ ಆದೇಶ ದಿನಾಂಕ: 06.03.2015ರ ಸರಳೀಕರಣ ಆದೇಶವನ್ನು ಹೊರಡಿಸಲಾಗಿದೆ. ಅದರಂತೆ,**

- ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಗುರುತಿಸಿ ಶಾಶ್ವತ ಬಿಪಿಎಲ್ ಕಾರ್ಡ್/ಆದ್ಯತಾ ಕುಟುಂಬ ಪಡಿತರ ಚೀಟಿ ಹೊಂದಿರುವ ಬಡತನ ರೇಖೆಗಿಂತ ಕೆಳಗಿರುವ ಕುಟುಂಬದಲ್ಲಿ ಜನಿಸಿದ ಎರಡು ಹೆಣ್ಣು ಮಕ್ಕಳು ಯೋಜನೆಯಡಿ ನೊಂದಣಿ ಮಾಡಲು ಅರ್ಹರಿರುತ್ತಾರೆ.
- ಕುಟುಂಬದಲ್ಲಿ ಮಕ್ಕಳ ಸಂಖ್ಯೆ ಎರಡನ್ನು ಮೀರಿರಬಾರದು. ವಿಶೇಷ ಪ್ರಕರಣಗಳಲ್ಲಿ ಅಂದರೆ ಮೊದಲನೇ ಹೆರಿಗೆಯಲ್ಲಿ ಅವಳಿ ತ್ರಿವಳಿ ಹೆಣ್ಣು ಮಕ್ಕಳು ಜನಿಸಿದ್ದಲ್ಲಿ ಹಾಗು ಎರಡನೇ ಹೆರಿಗೆಯಲ್ಲಿ ಅವಳಿ/ತ್ರಿವಳಿ ಹೆಣ್ಣು ಮಕ್ಕಳು ಜನಿಸಿದ್ದಲ್ಲಿ ಈ ಎಲ್ಲಾ ಹೆಣ್ಣು ಮಕ್ಕಳಿಗೂ ಸೌಲಭ್ಯ ನೀಡುವುದು. ಈ ಸೌಲಭ್ಯವನ್ನು ಎರಡು ಹೆರಿಗೆಗೆ ಮಾತ್ರ ಮಿತಿಗೊಳಿಸುವುದು. ಇಂತಹ ಪ್ರಕರಣಗಳಲ್ಲಿ ಮಾತ್ರ ಕುಟುಂಬದ ಮಕ್ಕಳ ಸಂಖ್ಯೆ ಎರಡನ್ನು ಮೀರಿರಬಾರದು ಎಂಬ ನಿಯಮವನ್ನು ಸಡಿಲಿಸಲಾಗಿದೆ.
- ಈ ಯೋಜನೆಯನ್ನು ಗ್ರಾಮಾಂತರ ಮತ್ತು ನಗರ ಪ್ರದೇಶಗಳಲ್ಲೂ ಅನುಷ್ಠಾನಗೊಳಿಸಲಾಗುವುದು. ಅಂಗನವಾಡಿ ಕೇಂದ್ರಗಳು ಇಲ್ಲದೆ ಇರುವ ಪ್ರದೇಶಗಳಲ್ಲಿ ವಾಸಿಸುವ ಪೋಷಕರು ತಮ್ಮ ಸಮೀಪದ ಅಂಗನವಾಡಿ ಕೇಂದ್ರದಲ್ಲಿ ನೊಂದಣಿ ಮಾಡುವುದು. ಮಗುವಿನ ಜನನವನ್ನು ಕಡ್ಡಾಯವಾಗಿ ನೊಂದಾಯಿಸಿರಬೇಕು ಹಾಗೂ ಜನನ ಪ್ರಮಾಣ ಪತ್ರವನ್ನು ಹೊಂದಿರಬೇಕು.
- ಯೋಜನೆಯಡಿ ನೋಂದಣಿ ಮಾಡಲು ಮಗು ಜನಿಸಿದ ಒಂದು ವರ್ಷದೊಳಗೆ ಇರುವ ಅವಧಿಯನ್ನು ಮಗು ಜನಿಸಿದ 2 ವರ್ಷಗಳವರೆಗೆ ವಿಸ್ತರಿಸಲಾಗಿದೆ.
- ಎರಡನೇ ಮಗುವನ್ನು ನೋಂದಣಿ ಮಾಡುವ ಸಂದರ್ಭದಲ್ಲಿ ಕಡ್ಡಾಯ ಕುಟುಂಬ ಯೋಜನೆ ಶಸ್ತ್ರ ಚಿಕಿತ್ಸೆಗೆ ಒಳಪಡಬೇಕೆಂಬ ಷರತ್ತನ್ನ ಕೈಬಿಡಲಾಗಿದೆ. ಉಳಿದಂತೆ ದಿನಾಂಕ:06.03.2015ರ ಸರಳೀಕರಣದಲ್ಲಿನ ನಿಯಮಗಳು ಯಥಾವತ್ತಾಗಿ ಮುಂದುವರೆಯುತ್ತದೆ.

**ಪರಿಪಕ್ವ ಮೊತ್ತ ಪಡೆಯಲು ಇರಬೇಕಾದ ಷರತ್ತುಗಳು:**

- ಪರಿಪಕ್ವ ಮೊತ್ತವನ್ನು ಪಡೆಯಲು ಫಲಾನುಭವಿ ಮಗು ಕನಿಷ್ಠ 8ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಪಡೆದಿರಬೇಕು. ಆದರೆ ವಿಕಲಚೇತನ ಮಕ್ಕಳಿಗೆ ವಿನಾಯಿತಿ ನೀಡಲಾಗಿದ್ದು, ಸದರಿ ಮಕ್ಕಳು 1 ರಿಂದ 5ನೇ ತರಗತಿವರೆಗೆ ವ್ಯಾಸಂಗ ಮಾಡಿರಬೇಕು, ಒಂದು ವೇಳೆ ವಿಕಲಚೇತನ ಮಕ್ಕಳು ತೀವ್ರತರವಾದ ವಿಕಲತೆಯಿಂದ ಬಳಲುತ್ತಿದ್ದಲ್ಲಿ ಸಂಬಂಧಪಟ್ಟ ಜಿಲ್ಲಾ ಉಪ ನಿರ್ದೇಶಕರು ಪ್ರತಿ ಪ್ರಕರಣಗಳ ಸಾಧಕ ಬಾಧಕಗಳನ್ನು ಪರಿಶೀಲಿಸಿ ಈ ಷರತ್ತನ್ನು ಸಹ ಸಡಿಲಿಸಲು ಅಧಿಕಾರ ನೀಡಿ ಆದೇಶಿಸಿದೆ.

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 932 ಕ್ಕೆ ಅನುಬಂಧ 2

| ಕ್ರ.ಸಂ | ಮಗುವಿನ ಹೆಸರು | ಜನ್ಮ ದಿನಾಂಕ | ತಂದೆಯ ಹೆಸರು | ತಾಯಿಯ ಹೆಸರು | ಗ್ರಾಮ | ಅಂಚೆ | ತಾಲೂಕು | ಫಲಾನುಭವಿಗೆ ನೀಡಿದ ಮಂಜೂರಾತಿ ಮೊತ್ತ |
|---|---|---|---|---|---|---|---|---|
| 1 | ಸಾನಿಧ್ಯ | 25.04.2009 | ಸದಾನಂದಾ | ಸುಮಿತ್ರ | ಅಲ್ಬಾಡಿ | ಆರ್ಡಿ | ಕುಂದಾಪುರ | 19300 |
| 2 | ಪೂಜಾ | 04.05.2009 | ಸುಬ್ಬ | ರೇವತಿ | ಹಾಲಾಡಿ-76 | ಹಾಲಾಡಿ-76 | ಕುಂದಾಪುರ | 19300 |
| 3 | ದಿಶಾ | 30.04.2009 | ದಯಾನಂದ | ಶೈಲಜಾ | ಕುಂಭಾಶಿ | ಕುಂಭಾಶಿ | ಕುಂದಾಪುರ | 19300 |
| 4 | ಸುಶ್ಮಿತಾ | 13.04.2009 | ಉದಯ | ಶೋಭಾ | ಕುಂಭಾಶಿ | ಕುಂಭಾಶಿ | ಕುಂದಾಪುರ | 19300 |
| 5 | ಕನ್ನಿಕಾ | 01.04.2009 | ಅಮರ | ಗೀತಾ | ಕೋಟೇಶ್ವರ | ಕೋಟೇಶ್ವರ | ಕುಂದಾಪುರ | 19300 |
| 6 | ಅನನ್ಯ | 09.05.2009 | ಬಸವರಾಜು | ಸವಿತಾ | ಬೀಜಾಡಿ | ಕೋಟೇಶ್ವರ | ಕುಂದಾಪುರ | 19300 |
| 7 | ತನ್ವಿ | 13.04.2009 | ಮಂಜುನಾಥ | ಶ್ಯಾಮಲ | ಕುಂದಬಾರಂದಾಡಿ | ಕುಂದಬಾರಂದಾಡಿ | ಕುಂದಾಪುರ | 19300 |
| 8 | ವೈಷ್ಣವಿ | 28.05.2009 | ಪರಮೇಶ್ವರ | ವಿನೋದ | ಆಲೂರು | ಆಲೂರು | ಕುಂದಾಪುರ | 19300 |
| 9 | ಜಸ್ವಿಟಾ | 28.04.2009 | ಜೋಸೆಫ್ | ಸುಶೀಲ | ತ್ರಾಸಿ | ತ್ರಾಸಿ | ಕುಂದಾಪುರ | 19300 |
| 10 | ಸೌಜನ್ಯ | 03.04.2009 | ಉಮೇಶ | ಶಮಿತಾ | ಕಂಚನೂರು | ಕಂಚನೂರು | ಕುಂದಾಪುರ | 19300 |
| 11 | ವಿದ್ಯಾ | 28.04.2009 | ಮಹಾಬಲ | ಪಾರ್ವತಿ | ವಕ್ವಾಡಿ | ವಕ್ವಾಡಿ | ಕುಂದಾಪುರ | 19300 |
| 12 | ಶಿಲ್ಪಾ. ವಿ | 13.05.2009 | ಬಾಬು | ಭಾಗೀರಥಿ | ಗುಜ್ಜಾಡಿ | ಗುಜ್ಜಾಡಿ | ಕುಂದಾಪುರ | 19300 |
| | ಪರಿಶೀಷ್ಠ ಪಂಗಡ | | | | | | | |
| 13 | ಅಶ್ವಿನಿ | 02.06.2009 | ವಿಠಲ ನಾಯ್ಕ | ವಿಲಾಸಿನಿ | ಕೆರಾಡಿ | ಕೆರಾಡಿ | ಕುಂದಾಪುರ | 19300 |
| | ಎರಡನೇ ಇತರೆ ಫಲಾನುಭವಿ | | | | | | | |
| 14 | ಕಾವ್ಯ | 01.04.2009 | ಅಮರ | ಗೀತಾ | ಕೋಟೇಶ್ವರ | ಕೋಟೇಶ್ವರ | ಕುಂದಾಪುರ | 18350 |
| | | | | | | | | |
| 15 | ಪ್ರಣೀತಾ | 27.05.2015 | ಸೋಮಪ್ಪ | ಗೀತಾ | ಪಡುಬಿದ್ರಿ | ಪಡುಬಿದ್ರಿ | ಉಡುಪಿ | 18350 |
| 16 | ಸಂಜನಾ | 15.05.2008 | ಹರ್ಷ ಪೂಜಾರಿ | ಸರೋಜ | ಆಲೂರು | ಆಲೂರು | ಕುಂದಾಪುರ | 19300 |

ಅನುಬಂಧ - 2

| ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ, ಪ್ರಶ್ನೆ ಸಂಖ್ಯೆ: 932ಕ್ಕೆ ಮಾಹಿತಿ– ಉಡುಪಿ ಜಿಲ್ಲೆ | | | | | | | | |
|---|---|---|---|---|---|---|---|---|
| ಕ್ರಸಂ | ಮಗುವಿನ ಹೆಸರು | ಜನ್ಮ ದಿನಾಂಕ | ತಂದೆಯ ಹೆಸರು | ತಾಯಿಯ ಹೆಸರು | ಗ್ರಾಮ | ಅಂಚೆ | ತಾಲೂಕು | ಫಲಾನುಭವಿಗೆ ನೀಡಿದ ಮಂಜೂರಾತಿ ಮೊತ್ತ |
| 1 | ಸಾನಿಧ್ಯ | 25.04.2009 | ಸದಾನಂದಾ | ಸುಮಿತ್ರ | ಅಲ್ಪಾಡಿ | ಆರ್ಡಿ | ಕುಂದಾಪುರ | 19300 |
| 2 | ಪೂಜಾ | 04.05.2009 | ಸುಬ್ಬ | ರೇವತಿ | ಹಾಲಾಡಿ–76 | ಹಾಲಾಡಿ–76 | ಕುಂದಾಪುರ | 19300 |
| 3 | ದಿಶಾ | 30.04.2009 | ದಯಾನಂದ | ಶೈಲಜಾ | ಕುಂಭಾಶಿ | ಕುಂಭಾಶಿ | ಕುಂದಾಪುರ | 19300 |
| 4 | ಸುಶ್ಮಿತಾ | 13.04.2009 | ಉದಯ ಪೂಜಾರಿ | ಶೋಭಾ | ಕುಂಭಾಶಿ | ಕುಂಭಾಶಿ | ಕುಂದಾಪುರ | 19300 |
| 5 | ಕನ್ನಿಕಾ | 01.04.2009 | ಅಮರ | ಗೀತಾ | ಕೋಟೇಶ್ವರ | ಕೋಟೇಶ್ವರ | ಕುಂದಾಪುರ | 19300 |
| 6 | ಅನನ್ಯ | 09.05.2009 | ಬಸವರಾಜು | ಸವಿತಾ | ಬೀಜಾಡಿ | ಕೋಟೇಶ್ವರ | ಕುಂದಾಪುರ | 19300 |
| 7 | ತನ್ವಿ | 13.04.2009 | ಮಂಜುನಾಥ | ಶ್ಯಾಮಲ | ಕುಂದಬಾರಂದಾಡಿ | ಕುಂದಬಾರಂದಾಡಿ | ಕುಂದಾಪುರ | 19300 |
| 8 | ವೈಷ್ಣವಿ | 28.05.2009 | ಪರಮೇಶ್ವರ | ವಿನೋದ | ಆಲೂರು | ಆಲೂರು | ಕುಂದಾಪುರ | 19300 |
| 9 | ಜಸ್ವಿಟಾ ಲೋಬೋ | 28.04.2009 | ಜೋಸೆಫ್ | ಸುಶೀಲ | ತ್ರಾಸಿ | ತ್ರಾಸಿ | ಕುಂದಾಪುರ | 19300 |
| 10 | ಸೌಜನ್ಯ | 03.04.2009 | ಉಮೇಶ | ಶಮಿತಾ | ಕಂಚನೂರು | ಕಂಚನೂರು | ಕುಂದಾಪುರ | 19300 |
| 11 | ವಿದ್ಯಾ | 28.04.2009 | ಮಹಾಬಲ | ಪಾರ್ವತಿ | ವಕ್ವಾಡಿ | ವಕ್ವಾಡಿ | ಕುಂದಾಪುರ | 19300 |
| 12 | ಶಿಲ್ಪಾ. ವಿ | 13.05.2009 | ಬಾಬು | ಭಾಗೀರಥಿ | ಗುಜ್ಜಾಡಿ | ಗುಜ್ಜಾಡಿ | ಕುಂದಾಪುರ | 19300 |
| | **ಪರಿಶೀಷ್ಟ ಪಂಗಡ** | | | | | | | |
| 13 | ಅಶ್ವಿನಿ | 02.06.2009 | ವಿಠಲ ನಾಯ್ಕ | ವಿಲಾಸಿನಿ | ಕೆರಾಡಿ | ಕೆರಾಡಿ | ಕುಂದಾಪುರ | 19300 |
| | **ಎರಡನೇ ಇತರೆ ಫಲಾನುಭವಿ** | | | | | | | |
| 14 | ಕಾವ್ಯ | 01.04.2009 | ಅಮರ | ಗೀತಾ | ಕೋಟೇಶ್ವರ | ಕೋಟೇಶ್ವರ | ಕುಂದಾಪುರ | 18350 |
| 15 | ಪ್ರಣಿತಾ | 27.05.2015 | ಸೋಮಪ್ಪ | ಗೀತಾ | ಪಡುಬಿದ್ರಿ | ಪಡುಬಿದ್ರಿ | ಉಡುಪಿ | 18350 |
| 16 | ಸಂಜನಾ | 15.05.2008 | ಹರ್ಷ ಪೂಜಾರಿ | ಸರೋಜ | ಆಲೂರು | ಆಲೂರು | ಕುಂದಾಪುರ | 19300 |

ಉಪನಿರ್ದೇಶಕರು(ಮಕ್ಕಳ ಕಲ್ಯಾಣ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಬೆಂಗಳೂರು